

ಛಾಯಾಗ್ರಹಣದ ಮೋಹಕ ಗುಣದಿಂದ ಗಮನಸೆಳೆಯುವ ಈ ಕಿರುಚಿತ್ರ ಒಂದು ಸಿನಿಮಾಕೃತಿಯಾಗಿ ನಿರಾಸೆ ಹುಟ್ಟಿಸುತ್ತದೆ.

■ ಗೌರಿ

# ಅನುಕಂಪದ ಬಲೆಯಲ್ಲಿ ಬೆಸ್ಟ್ ಆ್ಯಕ್ಟರ್

ಗ್ರಾಮೀಣ ಪ್ರದೇಶದಲ್ಲಿನ ಕೆಳವರ್ಗದ ವ್ಯಕ್ತಿಯೊಬ್ಬನ ಬಣ್ಣ ಹಚ್ಚುವ ಹುಚ್ಚು ಮತ್ತು ಅದರಿಂದ ಅವನು ಎದುರಿಸುವ ಸಂಕಟ ಸವಾಲುಗಳನ್ನು ಬಿಂಬಿಸುವ ಕಿರುಚಿತ್ರ 'ದಿ ಬೆಸ್ಟ್ ಆ್ಯಕ್ಟರ್'. ರಂಗಭೂಮಿ ಹಿನ್ನೆಲೆ ಇರುವ ನಾಗರಾಜ್ ಸೋಮಯಾಜಿ ಅವರು, ಶ್ರೀಧರ ಬನವಾಸಿ ಅವರ ಕಥೆಯನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸಿ ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

ಕುಂದಾಪುರದ ಆಸುಪಾಸಿನ ಒಂದು ಹಳ್ಳಿ ಕಥೆ ನಡೆಯುವ ಸ್ಥಳ. ಪ್ರತಿಯೊಂದು ದೃಶ್ಯವೂ ನಯನಮನೋಹರವಾಗಿ ಕಾಣಿಸಬೇಕು ಎಂಬ ಉದ್ದೇಶದಿಂದ ನಿರ್ದೇಶಕರು ಪಟ್ಟಿರುವ ಶ್ರಮ ಎದ್ದು ಕಾಣಿಸುತ್ತದೆ. ನಾಗರಾಜ್ ಫೋಟೊಗ್ರಾಫರ್ ಕೂಡ ಹೌದು. ಅವರ ಫೋಟೊಗ್ರಫಿ ವ್ಯಾಮೋಹಿತ ಕಣ್ಣು ಇಡೀ ಚಿತ್ರವನ್ನು ಆಳಿದೆ. ಮೇಲಿಂದ ಮೇಲೆ ಮೇಲಕ್ಕೆ ಹಾರಾಡುವ ಡ್ರೋನ್ ಶಾಟ್‌ಗಳು, ಬಡವನ ಮನೆಯೂ ಚಿಮಣಿಬುಡ್ಡಿ ಬೆಳಕಿನಲ್ಲಿ ಮೋಹಕವಾಗಿ ಕಾಣಿಸುವಂತೆ ಮಾಡುವ ಸಂಯೋಜನೆ, ಹೆಚ್ಚಿನ ದೃಶ್ಯಗಳಲ್ಲಿ ಕಾಣಿಸುವ ಮುಸ್ಸಂಜೆ–ಮುಂಜಾನೆಯ ಬೆಳಕಿನ ಆಟ, ಹಸಿರು ಹಾಸು ಎಲ್ಲವೂ ನೋಡುಗರನ್ನು ಎಷ್ಟು ಮೈಮರೆಸುತ್ತವೆ ಎಂದರೆ ಎಷ್ಟೋ ಸಲ ಕಥನವೂ ಹಿನ್ನೆಲೆಗೆ ಸರಿದುಬಿಡುತ್ತದೆ!

ಮಾಬ್ಲ ಆ ಊರಿನ ಎಲ್ಲರಿಗೂ ಪರಿಚಿತ. ಅವನಷ್ಟೇ ಅಲ್ಲ, ಅವನ ವೇಷದ ಹುಚ್ಚು ಕೂಡ ಎಲ್ಲರಿಗೂ ಗೊತ್ತಿರುವುದೇ. ವೇಷ ಹಾಕಿ ಕುಣಿಯಬೇಕು ಎಂಬ ಕಾರಣಕ್ಕೆ ಸಮೀಪ ಯಾವುದೇ ಯಕ್ಷಗಾನ ಇದ್ದರೂ ಮೇಳದ ಮಾಲೀಕರನ್ನು ಭೇಟಿಯಾಗಿ ವೇಷ ಬೇಡಿ ಬೈಸಿಕೊಳ್ಳುವ ಅವನು, ತನ್ನ ಸಂಸಾರವನ್ನು ವ್ಯಸನದ ಕಾರಣಕ್ಕೆ ಬೀದಿಗೆ ಬೀಳಿಸಿದವನಲ್ಲ.

ಮೇಲ್ನೋಟಕ್ಕೆ ಕಲಾಹಂಬಲದ ವ್ಯಕ್ತಿಯೊಬ್ಬನ ಸಾಧನೆಯ ದಾರಿಯಲ್ಲಿ ಎದುರಾಗುವ ಸವಾಲುಗಳನ್ನು ತೋರಿಸುವ ಚಿತ್ರದಂತೆ ಭಾಸವಾದರೂ ಈ ಕಥನಹಂದರದ ಹೆಣಿಗೆಯೇ ಗಟ್ಟಿಯಾಗಿ ನಿಲ್ಲುವಷ್ಟು ಬಿಗಿಯಾಗಿಲ್ಲ. ಸಂಭಾಷಣೆಯಲ್ಲಿನ ವಾಚಾಳಿತನವೂ ಚಿತ್ರದ ಪರಿಣಾಮವನ್ನು ಕುಗ್ಗಿಸಿದೆ. ನಿರ್ದೇಶಕರಿಗೆ ಮಾಬ್ಲನನ್ನು ಯಾವ ಲೆಕ್ಕದಲ್ಲಿಯೂ ಕೆಟ್ಟವನನ್ನಾಗಿ ಮಾಡಲು ಮನಸ್ಸಿಲ್ಲ. ಹಾಗಾಗಿ ಹೆಂಡತಿಯ ಬಾಯಿಯಲ್ಲಿಯೇ, 'ಆ ಉರಿ ಬಿಸ್ಲಾಂಗೆ ಮೈಮುರ್ಕಂಡ್ ಕೆಲಸ ಮಾಡ್ತ್ರಾಲೆ; ರಾತ್ರಿ ಬಂದು ಒಂಚೂರಾದ್ರೂ ಮನ್ಗಂತ್ರ್ಯಾ?' ಎಂದು ಕೇಳಿಸುತ್ತಾರೆ. ಆದರೆ ಮಾಬ್ಲನ ದುಡಿಮೆಯ ವಿವರ ಮಾತ್ರ ಇಡೀ ಚಿತ್ರದಲ್ಲಿ ಬರುವುದೇ ಇಲ್ಲ.

ಮಾಬ್ಲನನ್ನು ಅಮಾಯಕನನ್ನಾಗಿ ಕಾಣಿಸುವ ಭರದಲ್ಲಿ ಇಡೀ ಊರನ್ನೇ (ಐತಾಳರೊಬ್ಬರನ್ನು ಬಿಟ್ಟು) ಖಳಸ್ಥಾನದಲ್ಲಿ ನಿಲ್ಲಿಸುವುದೂ ನಿರ್ದೇಶಕರ ಅನುಕೂಲಸಿಂಧುತನವನ್ನೇ ಸೂಚಿಸುತ್ತದೆ. ಮಾಬ್ಲ ವೇಷ ಕೇಳಿದರೆ ಮೇಳದ ಮಾಲೀಕ ತಿರಸ್ಕರಿಸಿ ಬೈಯುವುದೇಕೆ? ಕಲಾವಿದರೆಲ್ಲ ಯಾಕೆ ಅವನನ್ನು ಮಾನ ಮರ್ಯಾದೆ ಇಲ್ಲದವನು ಎಂದೆಲ್ಲ ತುಚ್ಛವಾಗಿ ಆಡಿಕೊಳ್ಳುತ್ತಾರೆ? ಅವನು ಮುಖಕ್ಕೆ ಬಣ್ಣ ಬಳಿದುಕೊಂಡು 'ನಾ ಯಾರ್ ಗೊತ್ತಾಯ್ತಾ?' ಅಂತ ಕೇಳಿದರೆ ಯಾಕೆ ಊರ ಜನರು ಅವನ ಕುರೂಪದ ಬಗ್ಗೆ ಮಾತಾಡಿ, 'ನಿನ್ನಂಥವ್ರಲ ಯಾಕ ಬದ್ಕಿಪ್ಪದ್, ಹೋಯ್ ನೀ ಸಾಯ್' ಎನ್ನುವಷ್ಟು ಯಾಕೆ ಆಕ್ರೋಶದಿಂದ ಮಾತಾಡುತ್ತಾರೆ? – ಈ ಪ್ರಶ್ನೆಗಳಿಗೆಲ್ಲ ಮಾಬ್ಲನ ಪಾತ್ರದ ಬಗ್ಗೆ ಪ್ರೇಕ್ಷಕರಲ್ಲಿ ಅನುಕಂಪ ಹುಟ್ಟಿಸುವುದರ ಹೊರತು ಬೇರೆ ಸಮರ್ಥವಾದ ಉತ್ತರ ಚಿತ್ರದಲ್ಲಿ ಸಿಗುವುದೇ ಇಲ್ಲ. ಚಿತ್ರದ ಕೊನೆಗೆ ಅವನು ಕುಣಿಯುತ್ತಲೇ ಸತ್ತುಹೋಗುವುದಂತೂ ತೀರಾ ಕೃತಕವಾಗಿದೆ. ಹಾಗೆ ನೋಡಿದರೆ ಯಕ್ಷಗಾನ ಕಲೆ ಗೊತ್ತಿರುವ, ಅದರ ಬಗ್ಗೆ ಅಪಾರ ಗೌರವ ಹೊಂದಿರುವ ಕಲಾವಿದನಿಗೆ ತಾನು ಬಣ್ಣ ಬಳಿದುಕೊಂಡಾಗ ಚೆನ್ನಾಗಿ ಕಾಣಿಸುತ್ತೇನಾ ಎಂಬುದು ಮುಖ್ಯವಾಗುವುದಿಲ್ಲ. ಯಾಕೆಂದರೆ ಬಣ್ಣ ಬಳಿದುಕೊಳ್ಳುವುದು ಚಂದ ಕಾಣಲಿಕ್ಕಲ್ಲ, ಬದಲಿಗೆ ಆಯಾ ಪಾತ್ರದ ಲಕ್ಷಣವನ್ನು ವ್ಯಕ್ತಪಡಿಸಲಿಕ್ಕಾಗಿ.

ಕುಂದಾಪುರದ ಪ್ರಕೃತಿ ಸೌಂದರ್ಯದ ಮೋಹಕತೆಯನ್ನು ಆಸ್ವಾದಿಸಬಯಸುವವರು, ಮೋಹಕಪ್ರಧಾನ ಛಾಯಾಗ್ರಹಣದ ಕೌಶಲವನ್ನು ಅಭ್ಯಸಿಸಬಯಸುವವರು 'ಬೆಸ್ಟ್ ಆ್ಯಕ್ಟರ್' ಚಿತ್ರವನ್ನು ನೋಡಬಹುದು. ಆದರೆ ಒಂದು ಒಳ್ಳೆಯ ಸಿನಿಮಾ ಕೃತಿಯನ್ನು ಕಾಣುವ ಬಯಕೆಯುಳ್ಳವರಿಗೆ ಇದು ನಿರಾಸೆಯನ್ನೇ ಹುಟ್ಟಿಸುತ್ತದೆ.



**ಹೆಸರು:** ದಿ ಬೆಸ್ಟ್ ಆ್ಯಕ್ಟರ್
**ನಿರ್ದೇಶನ:** ನಾಗರಾಜ್ ಸೋಮಯಾಜಿ
**ನಿರ್ಮಾಣ:** ಸರ್ವಸ್ವ ಪ್ರೊಡಕ್ಷನ್ಸ್, ದಿನೇಶ್ ವೈದ್ಯ ಅಂಪಾರು
**ಛಾಯಾಗ್ರಹಣ:** ಎಸ್. ಕೆ. ರಾವ್
**ಸಂಕಲನ:** ಬಿ. ಎಸ್ ಸಂಕೇತ್
**ಸಂಗೀತ:** ಅರ್ಜುನ್ ರಾಮ್
**ತಾರಾಗಣ:** ಮಾಧವ ಕಾರ್ಕಡ, ಪ್ರತಿಮಾ ನಾಯಕ್, ಶಿಶಿರ ಕುಮಾರ್, ಮಾಸ್ಟರ್ ಉಲ್ಲಾಸ್, ಸಂಚಾರಿ ವಿಜಯ್

ಈ ಕಿರುಚಿತ್ರ ವೀಕ್ಷಣೆಗೆ bit.ly/3av2fDN ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.